ಜೈಕನ್ನಡಮ್ಮ

# ರೋಟರಿ ಸೆಲ್ಕೋ ಸಹಯೋಗದಲ್ಲಿ ಸೌರ ಜ್ಯೋತಿ ಯೋಜನೆ




ಬೆಳ್ತಂಗಡಿ ರೋಟರಿ ಕ್ಲಬ್ ಮತ್ತು ಸೆಲ್ಕೋ ಸೋಲಾರ್ ಲೈಟ್ಸ್ ಸಂಸ್ಥೆಯ ಸಹಯೋಗದೊಂದಿಗೆ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್‌ನ ಹಣಕಾಸಿನ ನೆರವಿನೊಂದಿಗೆ ತಾಲೂಕಿನ ಅತೀ ಹಿಂದುಳಿದ ಗ್ರಾಮಗಳ 150 ಕುಟುಂಬಗಳಿಗೆ ಸೌರ ಜ್ಯೋತಿ ಯೋಜನೆಯ ಅಡಿಯಲ್ಲಿ ಸೋಲಾರ್ ಲೈಟ್‌ಗಳನ್ನು ಅಳವಡಿಸಲಾಗುವುದು ಎಂದು ರೋಟರಿ ಕ್ಲಬ್ ಅಧ್ಯಕ್ಷ ಪ್ರತಾಪಸಿಂಹ ನಾಯಕ್ ತಿಳಿಸಿದ್ದಾರೆ.

ಉಜಿರೆ ಎಸ್.ಡಿ.ಎಂ. ಕಾಲೇಜಿನಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಈ ವಿಚಾರ ತಿಳಿಸಿದರು. ರೋಟರಿ ಸಂಸ್ಥೆ ತಾಲೂಕಿನಲ್ಲಿ ಹಲವು ಜನೋಪಯೋಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಜನರಿಗೆ ನೆರವಾಗಿದೆ. ರೋಟರಿ ಜಿಲ್ಲೆ 3180 ಇದರ 2010-11ನೇ ಸಾಲಿನ ಜಿಲ್ಲಾ ಯೋಜನೆಯಾದ ಸೌರ ಜ್ಯೋತಿಯನ್ನು ತಾಲೂಕಿನಲ್ಲಿ ವಿಶೇಷವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಕಳೆಂಜ, ನಿಡ್ಲೆ ಹಾಗೂ ಶಿಶಿಲ ಗ್ರಾಮಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ ಎಂದು ತಿಳಿಸಿದರು.

ಈ ಯೋಜನೆಗೆ ಸುಮಾರು 30 ಲಕ್ಷ ವೆಚ್ಚವಾಗಲಿದ್ದು, ಪ್ರತೀ ಫಲಾನುಭವಿಗೆ ಮೂಲ ಬಂಡವಾಳವಾದ ರೂ. 2 ಸಾವಿರವನ್ನು ರೋಟರಿ ಕ್ಲಬ್ ನೀಡಲಿದೆ. ಉಳಿದ ಹಣವನ್ನು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಹಾಗೂ ಸಿಂಡಿಕೇಟ್ ಬ್ಯಾಂಕ್ ಕಡಿಮೆ ಬಡ್ಡಿ ದರದಲ್ಲಿ ಫಲಾನುಭವಿಗಳಿಗೆ ಸಾಲ ನೀಡುತ್ತದೆ. ಇದನ್ನು ದೀರ್ಘಾವಧಿಯಲ್ಲಿ ಪಾವತಿಸಲು ಅನುಕೂಲ ಮಾಡಿಕೊಡಲಾಗುತ್ತಿದೆ. ಸೆಲ್ಕೋ ಸಂಸ್ಥೆಯ ಫಲಾನುಭವಿಗಳಿಗೆ ಒಂದು ವರ್ಷ ಉಚಿತ ಸೇವೆಯನ್ನು ಒದಗಿಸಲಿದೆ.

ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಸಮಸ್ಯೆ ತೀವ್ರವಾಗಿ ಕಾಡುತ್ತಿರುವಾಗ ಈ ಯೋಜನೆ ಹೆಚ್ಚು ಪ್ರಯೋಜನಕಾರಿಯಾಗಲಿದೆ. ಇನ್ನು ವಿದ್ಯುತ್ ತಲುಪದ ನೂರಾರು ಕುಟುಂಬಗಳಿದ್ದು ಇವರಿಗೆ ನೆರವಾಗುವ ಉದ್ದೇಶದಿಂದ ಯೋಜನೆಯನ್ನು ರೂಪಿಸಲಾಗುತ್ತಿದೆ ಎಂದು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಸೆಲ್ಕೋ ಸೋಲಾರ್ ಸಂಸ್ಥೆಯ ಡಾ| ಹರೀಶ್ ಹಂದೆ, ಎಸ್.ಡಿ.ಎಂ. ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಡಾ| ಬಿ. ಯಶೋವರ್ಮ, ರೋಟರಿ ಕಾರ್ಯದರ್ಶಿ ಜಯರಾಮ್, ಸೌರ ಜ್ಯೋತಿ ಯೋಜನೆಯ ನಿರ್ದೇಶಕರಾದ ನಾರಾಯಣ ಭಿಡೆ, ಸೋಲಾರ್ ಶಕ್ತಿಯ ಪ್ರಚಾರಕ, ವಿಜ್ಞಾನಿ ಡೆನ್ನಿಸ್ ಹೇಯ್ಸ್ ಉಪಸ್ಥಿತರಿದ್ದರು.